# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್‌ನಂ:0821– 2417106
ಫ್ಯಾಕ್ಸ್ ನಂ:0821 –2417105
e-mail:Cfo@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017

ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/18-19/ Cys-37 ದಿನಾಂಕ: 06 APR 2018

ಗೆ,
ಮುಖ್ಯ ಇಂಜಿನಿಯರ್ (ವಿ) ವಲಯ ಕಛೇರಿ,
ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ,
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ,
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂನಿ) ನಿಗಮ ಕಛೇರಿ,
ಚಾವಿಸನಿನಿ, ಮೈಸೂರು.

ಮಾನ್ಯರೆ,

**ವಿಷಯ:** ಆದಾಯ ತೆರಿಗೆಯ ಟಿ.ಡಿ.ಎಸ್ ಗೆ ಸಂಬಂಧಿಸಿದ 3CD ಯಲ್ಲಿ ವ್ಯತ್ಯಾಸವಿರುವ ಬಗ್ಗೆ:

************

ಆರ್ಥಿಕ್ಕ ವರ್ಷ 2016-17ನೇ ಸಾಲಿನಲ್ಲಿ ಎಲ್ಲಾ ಲೆಕ್ಕ ಘಟಕಗಳು ಆದಾಯ ತೆರಿಗೆ ಟಿ.ಡಿ.ಎಸ್ ಗೆ ಸಂಬಂಧಿಸಿದಂತೆ, ನಿಗದಿತ ನಮೂನೆಯಾದ 3CD ಯಲ್ಲಿ ವಿವರಗಳನ್ನು ಶಾಸನಬದ್ದ ಲೆಕ್ಕ ಪರಿಶೋದಕರಿಗೆ ಸಲ್ಲಿಸಿರುವುದು ಸರಿಯಷ್ಟೆ.

ಸದರಿ ನಮೂನೆಯಲ್ಲಿ ಮಾಹಿತಿಗಳನ್ನು ಸಲ್ಲಿಸುವಾಗ ಲೆಕ್ಕ ಘಟಕಗಳು ತಮ್ಮ ಟ್ಯಾನ್ (TAN) ಸಂಖ್ಯೆಯಲ್ಲಿ ಫೈಲಿಂಗ್ ಮಾಡಿರುವ ಟಿ.ಡಿ.ಎಸ್ ಯೊಂದಿಗೆ ತಾಳೆ ಮಾಡಿ, ಪರಿಶೀಲನೆ ಮಾಡದೇ ಸಲ್ಲಿಸಲಾಗಿರುತ್ತದೆ. ಈ ರೀತಿ ಸಲ್ಲಿಸಿದ ಮಾಹಿತಿಯನ್ನು ಶಾಸನ ಬದ್ದ ಲೆಕ್ಕ ಪರಿಶೋಧಕರು Tax Audit Returns Filing ಸಂದರ್ಭದಲ್ಲಿ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಲಾಗಿರುತ್ತದೆ.

ಇದರಿಂದ 3CD ನಮೂನೆಯಲ್ಲಿನ ಮಾಹಿತಿಗೂ ಹಾಗೂ ಲೆಕ್ಕ ಘಟಕಗಳ ಟ್ಯಾನ್ (TAN) ಸಂಖ್ಯೆಯಲ್ಲನ ಫೈಲಿಂಗ್ ಮಾಡಿರುವ ಆದಾಯ ತೆರಿಗೆ ಟಿ.ಡಿ.ಎಸ್ ನಲ್ಲಿ ವ್ಯತ್ಯಾಸವಾಗಿದ್ದು, ಇದರಿಂದ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಹೊರಡಿಸಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ.

ಶಾಸನ ಬದ್ಧ ತೆರಿಗೆಯಾದ ಆದಾಯ ತೆರಿಗೆ ವಿವರಗಳನ್ನು ಸರಿಯಾಗಿ ಸಲ್ಲಿಸದಿರುವುದು ವಿಷಾದನೀಯ ವಿಷಯವಾಗಿದ್ದು, ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಪಡೆದಿರುವ ಲೆಕ್ಕ ಘಟಕಗಳು ಟಿ.ಡಿ.ಎಸ್ ವಿವರಗಳು ವ್ಯತ್ಯಾಸವಿರುವ ಬಗ್ಗೆ ತಮ್ಮ ಹಂತದಲ್ಲಿಯೇ ಪರಿಶೀಲಿಸಿ, ಸರಿಪಡಿಸಿ, ವರದಿಯನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿ, ಅದರ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.

ಮುಂದುವರೆದು ಆರ್ಥಿಕ ವರ್ಷ 2017-18ನೇ ಸಾಲಿಗೂ ಸಹ 3CD ಮತ್ತು 3CA ನಮೂನೆಗಳಲ್ಲಿನ ವಿವರಗಳನ್ನು ಸಲ್ಲಸಬೇಕಾಗಿದ್ದು, ವಿವರಗಳನ್ನು ಸಲ್ಲಿಸುವಾಗ ಲೆಕ್ಕ ಘಟಕಗಳು ತಮ್ಮ ಟ್ಯಾನ್ (TAN) ಸಂಖ್ಯೆಯಲ್ಲಿ ಫೈಲಿಂಗ್ ಮಾಡಿರುವ ಟಿ.ಡಿ.ಎಸ್ ವಿವರಗಳನ್ನು ತಾಳೆ ಮಾಡಿ ನಿಗಮ ಕಛೇರಿಗೆ ಸಲ್ಲಿಸತಕ್ಕದ್ದು.

ತಪ್ಪಿದಲ್ಲಿ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳೇ ನೇರ ಹೊಣೆಗಾರರಾಗಿರುತ್ತಾರೆ.

ತಮ್ಮ ವಿಶ್ವಾಸಿ,

ಮುಖ್ಯ ಆರ್ಥಿಕ ಅಧಿಕಾರಿ.

ಪು.ತಿ.ನೋ

**ಪ್ರತಿಗಳು:-**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ,ನಿಗಮ ಕಛೇರಿ, ಮೈಸೂರು, ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್ (ವಿ) ವಲಯ ಕಛೇರಿ, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು (ಲೆ&ಕಂ)/(ಬಿ&ಆರ್)/(ಆ ಮತ್ತು ಮಾಸಂ), ಚಾವಿಸನಿನಿ, ನಿಗಮ ಕಛೇರಿ, ಮೈಸೂರು.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ). ಚಾ.ವಿ.ಸ.ನಿ.ನಿ.,
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ತೆರಿಗೆ) ಚಾವಿಸನಿನಿ, ನಿಗಮ ಕಛೇರಿ, ಮೈಸೂರು,
- ಮು.ಕ.

24